ದಿನಾಂಕಃ **10-08-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಪರವಾಗಿ ಮಾನ್ಯ ಶ್ರೀ.MMP ವಕೀಲರಿಂದಃ**

ಈ ದಾವೆಯನ್ನು ವಾದಿಯವರು ಏನಕ್ಕಾಗಿ ದಾಖಲು ಮಾಡಿದ್ದಾರೆ ಎಂದು ತಿಳಿದುಕೊಂಡಿರುತ್ತೇನೆ. ವಾದಿಯವರು ಜಮೀನನ್ನು ಮಾರಾಟ ಮಾಡಿದ್ದರು ಅದಕ್ಕಾಗಿ ಈ ದವೆಯನ್ನು ಸಲ್ಲಿಸಿದ್ದಾರೆ. ಈ ದಿನ ವಾದಿಯವರ ಮಗ ನಿಮ್ಮನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದಿದ್ದಾರೆ ಎಂದರೆ ಸರಿ. ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಏನು ಬರೆದಿದ್ದೇನೆ ಎಂದು ತಿಳಿದುಕೊಂಡಿದ್ದೆನೆ. ವಾದಿಯವರ ಗಂಡ ಮತ್ತು ನೀವು ಸ್ನೇಹಿತರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಅಕ್ಕ ಪಕ್ಕದ ಜಮೀನಿನವರು ಎಂದು ಉತ್ತರಿಸುತ್ತಾರೆ. ನೀವು, ವಾದಿ ಮತ್ತು ವಾದಿಯವರ ಗಂಡ ಅನ್ಯೂನ್ಯವಾಗಿದ್ದೀರಿ ಎಂದರೆ ಸರಿ. ವಾದಿಯ ಗಂಡ ಮತ್ತು ಪ್ರತಿವಾದಿ 1 ರವರ ಗಂಡ ಜಮೀನುಗಳನ್ನು ಬಾಯಿ ಮಾತಿನ ಮೂಲಕ ವಿಬಾಗ ಮಾಡಿಕೊಂಡಿರುವ ಬಗ್ಗೆ ಅದರ ಮಾತುಕತೆಗೆ ನಾನು ಸೇರಿರುವುದಿಲ್ಲ. ಆದ ಕಾರಣ ಅಲ್ಲಿ ಏನು ಮಾತುಕತೆ ಆಗಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯವರು ದಾವಾ ಆಸ್ತಿಯನ್ನು ವಾದಿಯವರಿಗೆ ಮಾರಾಟ ಮಾಡಿರುವ ಮಾತುಕತೆಗೆ ನಾನು ಸೇರಿರುವುದಿಲ್ಲ.

ಪ್ರತಿವಾದಿಯವರು ವಾದಿಯವರಿಗೆ 2000 ನೇ ಇಸವಿಯಲ್ಲಿ ದಾವಾ ಆಸ್ತಿಯನ್ನು ಮಾರಾಟ ಮಾಡಿ ಹಣವನ್ನು ಪಡೆದುಕೊಂಡಿದ್ದಾರೆ, ಆದರೆ ನನಗೆ ದಿನಾಂಕ ಮತ್ತು ತಿಂಗಳು ಗೊತ್ತಿಲ್ಲ. ವಾದಿಯವರು ಪ್ರತಿವಾದಿಯವರಿಗೆ ಹಣವನ್ನು ಮದ್ದೂರಿನ ತಾಲ್ಲೂಕು ಕಚೇರಿಯ ಬಳಿ ನೀಡಿರುತ್ತಾರೆ. 2,800 ರೂಗಳನ್ನು ವಾದಿಯವರು ಪ್ರತಿವಾದಿಯವರಿಗೆ ನೀಡಿರುತ್ತಾರೆ. 1000 ಮುಖಬೆಲೆಯ ಎರಡು ನೋಟುಗಳು, 500 ಮುಖಬೆಲೆಯ 1 ನೋಟು ಮತ್ತು 100 ಮುಖಬೆಲೆಯ 3 ನೋಟುಗಳನ್ನು ವಾದಿಯವರು ನೀಡಿರುತ್ತಾರೆ. ಆಗ ಸಮಯ ಸುಮಾರು ಮದ್ಯಾಹ್ನ 12.00 ಗಂಟೆ ಆಗಿತ್ತು. ನಿಪಿ-1 ಕರಾರು ಪತ್ರವನ್ನು ಪತ್ರ ಬರಹಗಾರರು ಬರೆದಿರುತ್ತಾರೆ, ಆದರೆ ಅವರ ಹೆಸರು ನನಗೆ ಗೊತ್ತಿಲ್ಲ. ನಿಪಿ-1 ಕರಾರು ಪತ್ರವನ್ನು ಪತ್ರ ಬರಹಗಾರರ ಕಚೇರಿಯಲ್ಲಿ ಬರೆದಿರುತ್ತಾರೆ. ಸದರಿ ಸ್ಟಾಂಪ್ ಪೇಪರ್ ನ್ನು ವಾದಿ ಮತ್ತು ಅವರ ಗಂಡ ತಂದಿರುತ್ತಾರೆ. ನಿಪಿ-1 ರ ಒಕ್ಕಣೆಯನ್ನು ಪ್ರತಿವಾದಿ 1 ಮತ್ತು ಅವರ ಗಂಡ ನೀಡಿರುತ್ತಾರೆ. ಸದರಿ ಸ್ಟಾಂಪ್ ಪೇಪರ್ ಎಷ್ಟು ಮುಖಬೆಲೆಯದ್ದು ಎಂದು ನನಗೆ ನೆನಪಿಲ್ಲ. ಸದರಿ ಕರಾರು ಪತ್ರವನ್ನು ಬೆರಳಚ್ಚು ಮಾಡಿದ್ದಾರೆ. ಬೆರಳಚ್ಚುನ್ನು ಬೆರಳಚ್ಚುಗಾರರು ಮಾಡಿದ್ದಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಪತ್ರ ಬರಹಗಾರರ ಹೆಸರನ್ನು ನಾನು ತಿಳಿದುಕೊಂಡಿಲ್ಲ.

ನಿಪಿ-1 ಕರಾರು ಪತ್ರಕ್ಕೆ ಮೊದಲಿಗೆ ಪ್ರತಿವಾದಿ 1 ಮತ್ತು ಅವರ ಗಂಡ ಸಹಿ ಮಾಡಿರುತ್ತಾರೆ. ನಂತರ ಸಾಕ್ಷಿದಾರರಾಗಿ ನಾನು ಸಹಿ ಮಾಡಿರುತ್ತೇನೆ. ನಿಪಿ-1 ಕರಾರು ಪತ್ರದಲ್ಲಿ ನಾನು ಒಂದು ಕಡೆ ಮಾತ್ರ ಸಹಿ ಮಾಡಿರುತ್ತೇನೆ. ಪ್ರತಿವಾದಿ 1 ಮತ್ತು ಅವರ ಗಂಡ ಎಷ್ಟು ಕಡೆ ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಒಂದು ಕಡೆ ಮಾತ್ರ ಸಹಿ ಮಾಡಿದ್ದನ್ನು ನಾನು ನೋಡಿರುತ್ತೇನೆ. ನಾನು ಸಹಿ ಮಾಡಿದ ನಂತರ ಸಾಕ್ಷಿದಾರರಾಗಿ ಚೆನ್ನಯ್ಯ ಎನ್ನುವವರು ಸಹಿ ಮಾಡಿದ್ದಾರೆ. ನಂತರ ಸದರಿ ಕರಾರು ಪತ್ರದಲ್ಲಿ ಬೇರೆ ಯಾರು ಸಹಿ ಮಾಡಿರುವುದಿಲ್ಲ. ಸದರಿ ಕರಾರು ಪತ್ರವನ್ನು ಬರೆದ ನಂತರ ಉಪನೊಂದಣಾಧಿಕಾರಿಗಳ ಕಚೇರಿಗೆ ಹೋಗಿ ನೊಂದಣಿ ಮಾಡಿಸಿರುವುದಿಲ್ಲ ಕಾರಣ ಸದರಿ ಆಸ್ತಿ ಮತ್ತು ಪಹಣಿ ಪ್ರತಿವಾದಿಯವರ ಹೆಸರಿನಲ್ಲಿ ಇರಲಿಲ್ಲ. ಪ್ರತಿವಾದಿಯವರ ಹೆಸರಿನಲ್ಲಿ ಖಾತೆ ಮತ್ತು ಪಹಣಿ ಇಲ್ಲದ ಕಾರಣ ಕರಾರುಪತ್ರ ಬರೆದುಕೊಡಬೇಡಿ ಎಂದು ನಾನು ತಿಳಿಸಿಲ್ಲ. ಖಾತೆ ಮಾಡಿಸಿಕೊಂಡ ನಂತರ ಕರಾರುಪತ್ರ ಬರೆದುಕೊಡಿ ಎಂದು ನಾನು ಪ್ರತಿವಾದಿಯವರಿಗೆ ತಿಳಿಸಿಲ್ಲ.

ದಾವಾ ಆಸ್ತಿಯ ಖಾತೆ ಪ್ರತಿವಾದಿ 1 ರವರ ಗಂಡ ಪುಟ್ಟಸ್ವಾಮಿ ರವರ ಹೆಸರಿನಲ್ಲಿ ಇರುತ್ತದೆ. ಕರಾರುಪತ್ರ ಬರೆದ ಸಮಯದಲ್ಲಿ ಸದರಿ ಪುಟ್ಟಸ್ವಾಮಿ ರವರು ಇದ್ದರು ಎಂದರೆ ಸರಿ. ದಾವಾ ಆಸ್ತಿಯ ದಾಖಲೆಗಳು ಸದರಿ ಪುಟ್ಟಸ್ವಾಮಿ ರವರ ಹೆಸರಿನಲ್ಲಿ ಇರುವ ಬಗ್ಗೆ ನಾನು ದಾಖಲೆಯನ್ನು ನೋಡಿಲ್ಲ. ಆದರೆ ದಾವಾ ಆಸ್ತಿ ಅವರ ಹೆಸರಿನಲ್ಲಿತ್ತು ಎಂದು ಉತ್ತರಿಸುತ್ತಾರೆ. ಆ ಸಮಯದಲ್ಲಿ ದಾವಾ ಆಸ್ತಿ ಪುಟ್ಟಸ್ವಾಮಿ ರವರ ಹೆಸರಿನಲ್ಲಿ ಇದ್ದ ಕಾರಣ ಕರಾರು ಪತ್ರವನ್ನು ನೊಂದಣಿ ಮಾಡಿಕೊಡುವಂತೆ ಕೇಳಿದ್ದೀರಾ ಎಂದರೆ ಸಾಕ್ಷಿ ಖಾತೆಯನ್ನು ಬದಲಾವಣೆ ಮಾಡಿ ನೊಂದಣಿ ಮಾಡಿಸಿಕೊಡುತ್ತೆವೆ ಎಂದು ತಿಳಿಸಿರುತ್ತಾರೆ ಎಂದು ಉತ್ತರಿಸುತ್ತಾರೆ. ಖಾತೆಯನ್ನು ವಾದಿಯವರ ಹೆಸರಿಗೆ ಬದಲಾವಣೆ ಮಾಡಿ ನೊಂದಣಿ ಮಾಡಿಸಿಕೊಡುತ್ತೆವೆ ಎಂದು ತಿಳಿಸಿರುತ್ತಾರೆ. ಈ ಎಲ್ಲಾ ವಿಚಾರವನ್ನು ನಿಪಿ-1 ಕರಾರು ಪತ್ರದಲ್ಲಿ ಬರೆಸಿರುತ್ತೇವೆ. ಪ್ರತಿವಾದಿಯವರು ವಾದಿಯವರಿಗೆ ಕರಾರುಪತ್ರವನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿ 4 ಗುಂಟೆ ವಿಸ್ತೀರ್ಣವಿದೆ. ನಿಪಿ-1 ಕರಾರು ಪತ್ರವನ್ನು ಬರೆದ ಸಮಯದಲ್ಲಿ 1 ಗುಂಟೆ ಜಮೀನು 25 ಸಾವಿರ ರೂ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ, ಸಾಕ್ಷಿ ಕೇವಲ 800 ರೂ ಬೆಲೆ ಬಾಳುತ್ತಿತ್ತು ಎಂದು ಉತ್ತರಿಸುತ್ತಾರೆ. ದಾವಾ ಆಸ್ತಿ ನಿವೇಶನಗಳನ್ನು ಮಾಡುವ ಸ್ಥಳ ಎಂದರೆ ಸರಿಯಲ್ಲ.

ದಾವಾ ಆಸ್ತಿ ಊರಿಗೆ ಸಮೀಪವಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿ 1 ಗುಂಟೆಗೆ 25 ಸಾವಿರ ರೂ ಬೆಲೆ ಬಾಳುತ್ತಿತ್ತು, ಕೇವಲ 800 ರೂ ಬೆಲೆ ಬಾಳುತ್ತಿತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನಿಪಿ-1 ಕರಾರು ಪತ್ರವನ್ನು ನೀವು ಮತ್ತು ವಾದಿಯವರು ಸೇರಿ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ. ನೀವು ಹೇಳಿದ ರೀತಿಯಲ್ಲಿ ಯಾವುದೇ ಕರಾರು ಪತ್ರ ಆಗಿಲ್ಲ. ವಾದಿ ಮತ್ತು ಪ್ರತಿವಾದಿಯವರ ಮದ್ಯೆ ಹಣಕಾಸಿನ ವ್ಯವಹಾರ ನಡೆದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ಅಕ್ರಮವಾಗಿ ಕಬಳಿಸಲು ಮತ್ತು ಪ್ರತಿವಾದಿಯವರಿಗೆ ತೊಂದರೆ ನೀಡಲು ವಾದಿಯವರು ಸುಳ್ಳು ದಾವೆನನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯವರು ನಿಮ್ಮ ಮನೆಯ ಪಕ್ಕದವರಾದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿಯ ಸಹಿಃ